ಈ) ಮೈಸೂರು ಮಹಾನಗರ ಪಾಲಿಕೆಯು ಮಹಾಪೌರರ ಅಧ್ಯಕ್ಷತೆಯಲ್ಲಿ ಗುತ್ತಿಗೆದಾರರನ್ನು ಕರೆಸಿ, ಎರಡು ವಿಶೇಷ ಸಭೆಗಳನ್ನು ನಡೆಸಲಾಗಿರುತ್ತದೆ. ಈ ಸಭೆಯಲ್ಲಿ ಗುತ್ತಿಗೆದಾರರು ಕಾಮಗಾರಿಯನ್ನು ಮೂರು ತಿಂಗಳಲ್ಲಿ ಮುಗಿಸುವುದಾಗಿ ತಿಳಿಸಿರುತ್ತಾರೆ.

5424(6196) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) : ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಾದ್ಯಂತ ಇರುವ ಜಲಾಶಯಗಳಾವುವು; ಅವುಗಳ ಸ್ಥಳಗಳಾವುವು; ಈ ಜಲಾಶಯಗಳ ನಿರ್ಮಾಣ ಆದದ್ದು ಯಾವಾಗ; (ವಿವರ ನೀಡುವುದು);

ಆ) ಈ ಜಲಾಶಯಗಳಲ್ಲಿನ ಗರಿಷ್ಠ ನೀರಿನ ಮಟ್ಟ ಎಷ್ಟು; ಈ ಜಲಾಶಯಗಳ ಎತ್ತರ ಎಷ್ಟು;

ಇ) ಈ ಜಲಾಶಯಗಳ ಪೈಕಿ ಯಾವ ಯಾವ ಜಲಾಶಯಗಳಲ್ಲಿ ಎಷ್ಟೆಷ್ಟು ಅಡಿ ಹೂಳು ತುಂಬಿದೆ; ವಿವರ ನೀಡುವುದು;

ಈ) ಜಲಾಶಯಗಳಿಗೆ ತೊಂದರೆ ಆಗದ ರೀತಿ ಎಷ್ಟು ಅಡಿ ಹೂಳೆತ್ತಬಹುದು ಹಾಗೆ ಹೂಳೆತ್ತಲು ಯಾವ ಯಾವ ಕ್ರಮ ವಹಿಸಲಾಗಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಜಲ ಸಂಪನ್ಮೂಲ ಇಲಾಖೆಯ ಭಾರೀ ಮತ್ತು ಮಧ್ಯಮ ನೀರಾವರಿ ಅಡಿಯಲ್ಲಿ ಬರುವ ಜಲಾಶಯಗಳನ್ನು ಅವುಗಳ ಸ್ಥಳಗಳು ಹಾಗೂ ನಿರ್ಮಾಣ ಆದ ವರ್ಷ ಇತ್ಯಾದಿ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಆ) ಮೇಲಿನ ಉತ್ತರಕ್ಕೆ ಸಂಬಂಧಿಸಿದಂತೆ ಜಲಾಶಯಗಳ ಗರಿಷ್ಠ ನೀರಿನ ಮಟ್ಟ ಹಾಗೂ ಜಲಾಶಯಗಳ ಎತ್ತರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಇ) ರಾಜ್ಯದ ಕೆಳಕಂಡ ಜಲಾಶಯಗಳಲ್ಲಿನ ಹೂಳಿನ ಶೇಖರಣೆ ಪ್ರಮಾಣವನ್ನು ಅಂದಾಜಿಸಲಾಗಿದೆ.

ತುಂಗಭದ್ರ ಜಲಾಶಯ	–	21.50 ಟಿ.ಎಂ.ಸಿ.
ಮಲಪ್ರಭಾ ಜಲಾಶಯ	–	2.775 ಟಿ.ಎಂ.ಸಿ.
ನಾರಾಯಣಪುರ ಜಲಾಶಯ	–	5.105 ಟಿ.ಎಂ.ಸಿ
ಕೃಷ್ಣರಾಜಸಾಗರ ಜಲಾಶಯ	–	1.054 ಟಿ.ಎಂ.ಸಿ

ಈ) ಜಲಾಶಯಗಳಿಗೆ ತೊಂದರೆ ಆಗದ ರೀತಿ ತೂಬಿನ ಮಟ್ಟದವರೆಗೆ ಹೂಳೆತ್ತಬಹುದು. ಲಭ್ಯವಿರುವ ತಾಂತ್ರಿಕ ಸೌಲಭ್ಯದಿಂದ ಭಾರಿ ಪ್ರಮಾಣದಲ್ಲಿ ಶೇಖರಗೊಂಡಿರುವ ಹೂಳು ತೆಗೆಯುವಿಕೆ ಹಾಗೂ ಸಾಗಾಣಿಕೆ ಕಾರ್ಯ ಅಮಿತವ್ಯಯ (Uneconomical) ವಾಗುವುದರಿಂದ ಹೂಳು ತೆಗೆಯಲು ಯಾವುದೇ ಕ್ರಮ ಯೋಜಿಸಿರುವುದಿಲ್ಲ.

ಅನುಬಂಧ

ಜಲ ಸಂಪನ್ಮೂಲ ಇಲಾಖೆಯ (ಭಾರಿ ಮತ್ತು ಮಧ್ಯಮ) ಜಲಾಶಯಗಳ ವಿವರಗಳು

ಕ್ರಮ ಸಂಖ್ಯೆ	ಜಲಾಶಯಗಳು	ಸ್ಥಳ	ನಿರ್ಮಾಣ ಪೂರ್ಣಗೊಂಡ ವರ್ಷ	ಜಲಾಶಯದ ಎತ್ತರ ಮೀ.ಗಳಲ್ಲಿ	ಗರಿಷ್ಟ ನೀರಿನ ಮಟ್ಟ ಮೀ.ಗಳಲ್ಲಿ (ಸಮುದ್ರ ಮಟ್ಟದಿಂದ
1	2	3	4	5	6
1	ತುಂಗಾಭದ್ರ	ಮಲ್ಲಾಪುರ	1953	49.37	497.74
2	ಹಗರಿ ಬೊಮ್ಮನ ಹಳ್ಳಿ	ಮಾಲವಿ	1979	17.60	525.78
3	ಹಿರೇಹಳ್ಳ	ಕಿನ್ನಾಳ	2001	15.00	542.85
4	ಕನಕನಾಲಾ	ಕಿಲ್ಲಾರ ಹಟ್ಟಿ	1971–72	15.54	489.50
5	ಘಟಪ್ರಭಾ–I &II	ಹಿಡಕಲ್	1974	53.34	662.94
6	ಮಲಪ್ರಭಾ	ನವಿಲುತೀರ್ಥ	1974	43.13	633.83
7	ಅಂಬ್ಲಿಗೊಳ	ಅಂಬ್ಲಿಗೊಳ	1964	20.77	58.9 (RL)
8	ಅರಶಂಕರ್	ಅರಶಂಕರ್	1957	18.97	540.55
9	ಚಂದ್ರಂಪಳ್ಳಿ	ಚಂದಾಪುರ	1973	34.97	493.15
10	ಚಿತ್‌ವಾಡಗಿ	ಕಡೂರು	1971	12.00	561.00
11	ಧರ್ಮ	ಯಮಗಲಿ	1964	20.12	588.24
12	ಗಾಯತ್ರಿ	ಕರಿಯಾಲ	1963	45.71	626.85
13	ಹತ್ತಿಕುಣಿ	ಹತ್ತಿಕುಣಿ	1973	22.88	415.45
14	ನಾಗತಾಣ	ನಾಗತಾಣ	1961	10.67	71.98(RL)
15	ನಾರಾಯಣಪುರ	ಬಾಚಿಹಾಳ	1982	25.81	492.25
16	ಆಲಮಟ್ಟಿ	ಆಲಮಟ್ಟಿ	2001	40.30	519.60
17	ನಾರಿಹಳ್ಳ	ತಾರಾನಗರ	1979	30.92	542.45
18	ರಾಜೋಲಿ ಬಂಡ	ರಾಜೋಲಿ ಬಂಡ	1960	9.45	332.32
19	ರಾಮನ ಹಳ್ಳಿ	ಬಳಗನೂರು	1958	16.50	457.18
20	ಸೌದಾಗರ್	ಸಮನಾಪುರ	1987	27.03	430.00
21	ಮುಲ್ಲಾಮರಿ ಮೇಲ್ದಂಡೆ	ಖೇಡ್ಡಾ	1984	28.40	588.60
22	ನುಗು	ಬಿಕ್ವಾಲ	1959	43.58	725.40
23	ಕೆ.ಆರ್. ಸಾಗರ	ಕನ್ನಂಬಾಡಿ	1931	42.67	752.45
24	ಬೈರಮಂಗಲ	ಬೈರಮಂಗಲ	1945	23.00	32.00(RL)
25	ಚಿಕ್ಕಹೊಳೆ	ಅಟ್ಟಗೋಲಿಪುರ	1969	30.50	755.59
26	ಗುಂಡಾಲ್	ಕಾಮಗೆರೆ	1980	31.55	694.18
27	ಹೆಬ್ಬಾಳ್ಳ	ಹೆಚ್.ಡಿ. ಕೋಟೆ	1965	23.60	704.39

28	ಕಣ್ವ	ಕನ್ನಮಂಗಲ	1946	22.57	698.91
29	ಮಂಗಳ	ಮಂಗಳ	1970	14.44	726.51
30	ಮಾರ್ಕೋನಹಳ್ಳಿ	ಮಾರ್ಕೋನಹಳ್ಳಿ	1941	22.25	726.51
31	ಸುವರ್ಣಾವತಿ	ಅತ್ತಿಗುಳಿಪುರ	1984	25.90	748.28
32	ವಾಣಿವಿಲಾಸ ಸಾಗರ	ಮಾರಿಕಣಿವೆ	1907	49.35	652.24
33	ಅಂಜನಾಪುರ	ಅಂಜನಾಪುರ	1936	28.04	46.05(RL)
34	ಭದ್ರಾ ಜಲಾಶಯ	ಲಕ್ಕವಳ್ಳಿ	1965	71.63	657.76
35	ಜಂಬದಹಳ್ಳಿ ಜಲಾಶಯ	ದುಗ್ಗಲಾಪುರ	1970	31.69	683.40
36	ಕಬಿನಿ	ಬೀಚನಹಳ್ಳಿ	1974	58.00	696.16
37	ಹಾರಂಗಿ	ಹುದ್ಲೂರು	1982	53.00	871.38
38	ತಾರಕ	ಪೆಂಜಾಹಳ್ಳಿ	1984	40.00	739.14
39	ಬಿಕ್ಲಿಹೊಳೆ	ರಂಗಸಮುದ್ರ	1985	25.30	875.50
40	ನಲ್ಲೂರು ಅಮ್ಮಣಿಕೆರೆ	ಇಂಗಲವಾಡಿ	1986	15.04	774.63
41	ಮಂಚನಬೆಲೆ	ಮಂಚನಬೆಲೆ	1981	38.70	737.15
42	ಇಗ್ಗಲೂರು	ಇಗ್ಗಲೂರು	1985	18.00	608.08
43	ಯಗಚಿ	ಚಿಕ್ಕ ಬ್ಯಾಡಗೆರೆ	2000	26.23	964.60
44	ವಾಟೆಹೊಳೆ	ಲಕ್ಕೇನಹಳ್ಳಿ	1986	44.48	966.16
45	ಹೇಮಾವತಿ	ಗೊರೂರು	1980	44.50	890.85
46	ಹರಿನಾಲಾ	ತಿಗಡಿ	2004	19.11	675.10
47	ಗಂಡೋರಿನಾಲಾ	ಬೆಳೆಕೋಬಾ	2002	24.27	461.00
48	ಬೆಣ್ಣೆತೋರ	ಹೆರೂರು	2001	31.39	441.05
49	ಮುಲ್ಲಾಮರಿ ಕೆಳದಂಡೆ	ನಾಗರಾಳ	2001	24.46	491.00
50	ಅಮರ್ಜಾ	ಸಂಗೊಳಗಿ	1978	31.85	461.50
51	ಚುಳ್ಕಿನಾಲಾ	ಮುಸ್ತಾಪುರಾ	1979	18.00	592.00
52	ಕಾರಂಜಾ	ಬ್ಯಾಲಹಳ್ಳಿ	1989	28.10	587.00
53	ತುಂಗಾ ಮೇಲ್ದಂಡೆ	ಲಕ್ಕವಳ್ಳಿ	1965	14.95	588.24

5426(6043) ಶ್ರೀ ಶಶಿಕಾಂತ್ ಅಕ್ಕಪ್ಪ ನಾಯಕ (ಹುಕ್ಕೇರಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹುಕ್ಕೇರಿ ಮತ ಕ್ಷೇತ್ರದ ಹುಕ್ಕೇರಿ ವ್ಯಾಪ್ತಿಯಲ್ಲಿ ಬರುವ ನೀರಾವರಿ ನಿಗಮಕ್ಕೆ ಸಂಬಂಧಿಸಿದಂತೆ ಹಿಡಕಲ್ ಡ್ಯಾಂನಲ್ಲಿ ಇರುವ ಮೀನುಮರಿ ತಯಾರಿಕಾ ಘಟಕದ ಎಷ್ಟು;

ಆ) ಅಲ್ಲಿರುವ ಮೀನುಮರಿ ತಯಾರಿಕೆಯ ಟ್ಯಾಂಕ್‌ಗಳ ಸಂಖ್ಯೆ ಎಷ್ಟು ಅದರಲ್ಲಿ ಉಪಯೋಗವಾಗುತ್ತಿರುವ ಟ್ಯಾಂಕ್‌ಗಳ ಸಂಖ್ಯೆ ಎಷ್ಟು; ಉಳಿದ ಟ್ಯಾಂಕ್‌ಗಳೂ ಸೇರಿದಂತೆ ಸಂಪೂರ್ಣ ಮಾಹಿತಿ ನೀಡುವುದು;